2. ಪೊಸದುರ್ಗ ತಾಲ್ಲೂಕಿನ ಹೊಸ ಕಂದೂರು ಗ್ರಾಮದ ಸರ್ವೆ ನಂ. 45, 46ರಲ್ಲಿ ಹಿಂದುಳಿದ ವರ್ಗದ ಜನರ ಸ್ವಾಧೀನದಲ್ಲಿದ್ದ ಜಮೀನಿನ ಮೇಲೆ ಅಕ್ರಮಣ ನಡೆಸಿರುವುದು,

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೇ, ಈ ವಿಷಯಕ್ಕೆ ಸಂಬಂಧಿಸಿದ ಮೆಟೀರಿಯಲ್ಸ್ ಎಲ್ಲಾ ಬಂದಿದೆ, ಈ ಬಗ್ಗೆ ನಾಳೆ ಉತ್ತರ ಕೊಡುತ್ತೇನೆ, ಆದ್ದರಿಂದ ಈ ವಿಷಯವನ್ನು ನಾಳೆ ತೆಗೆದುಕೊಳ್ಳಿ.

ಶ್ರೀ ಆರ್. ರಾಮಯ್ಯ.—ನಾಳೆ, ನಾಳೆ ಎಂದು ಹೇಳುತ್ತಾ ಹೋದರೆ ಹೇಗೆ? ಇದು ಬಹು ಮುಖ್ಯವಾದ ಪ್ರಶ್ನೆ, ಮುಂದೂಡುವುದು ಬೇಡ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾಳೆ ಗ್ಯಾರಂಟಿ ಉತ್ತರ ಕೊಡುತ್ತೇನೆ.

ಅಧ್ಯಕ್ಷರು.—ಆಯಿತು, ಇದನ್ನು ನಾಳೆ ತೆಗೆದುಕೊಳ್ಳೋಣ.

3) ಮಂಡಿಕೇರಿ ಜಿಲ್ಲಾ ಕಾರಾಗೃಹದ ಇಬ್ಬರು ಜೈಲ್ ಸಿಬ್ಬಂದಿ ಮತ್ತು ಎಂಟು ಮಂದಿ ವಿಚಾರಣಾಧೀನ ಖೈದಿಗಳು ಅಕ್ರಮ ಮರ ಸಾಗಾಣಿಕೆಗೆ ಯತ್ನಿಸಿ ಪೋಲೀಸರ ಬಂಧನದಲ್ಲಿರುವುದು.

ಶ್ರೀ ಡಿ. ಎ. ಚಿನ್ನಪ್ಪ (ಮಡಿಕೇರಿ).—ಮಾನ್ಯ ಅಧ್ಯಕ್ಷರೇ, ಮಡಿಕೇರಿ ಜಿಲ್ಲಾ ಕಾರಾಗೃಹದ ಎಂಟು ಮಂದಿ ಖೈದಿಗಳ ನೆರವಿನಿಂದ ಇಬ್ಬರು ಜೈಲ್ ಸಿಬ್ಬಂದಿಯವರು ತಾಳತ್‌ಮನೆಯಿಂದ ಅಕ್ರಮ ಮರ ಸಾಗಾಣಿಕೆಗೆ ಯತ್ನಿಸಿ ಪೋಲೀಸರ ಬಂಧನದಲ್ಲಿರುವ ಬಗ್ಗೆ ಮಾನ್ಯ ಹಣಕಾಸು ಸಣ್ಣ ಉಳಿತಾಯ ಮತ್ತು ಬಂದೀಖಾನೆಗಳ ರಾಜ್ಯ ಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ವೀರಣ್ಣ (ಹಣಕಾಸು, ಸಣ್ಣ ಉಳಿತಾಯ, ಬಂದೀಖಾನೆಗಳು ಮತ್ತು ಗೃಹ ಖಾತೆ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ಶ್ರೀ ಡಿ. ಎ. ಚಿನ್ನಪ್ಪ, ಶ್ರೀ ಎಂ. ವೀರಪ್ಪ ಮೊಯಿಲಿ ಮತ್ತಿತರ ಮಾನ್ಯ ಸದಸ್ಯರುಗಳು ತಂದಿರುವ ಗಮನ ಸೆಳೆಯುವ ಸೂಚನೆಗೆ ಈ ಕೆಳಕಂಡ ಹೇಳಿಕೆಯನ್ನು ನೀಡಲು ಇಚ್ಛಿಸುತ್ತೇನೆ.

ದಿನಾಂಕ ೨೮-೫-೮೮ರಂದು ಕೊಟಗೇರಿ ಗ್ರಾಮಸ್ಥರು ಅದೇ ಗ್ರಾಮಕ್ಕೆ ಸಂಬಂಧಿಸಿದ ಕೂಲಿ ಪ್ರಕರಣದಲ್ಲಿ ವಿಚಾರಣಾಧೀನ ಖೈದಿ ಆಗಿರುವ ಬಿ ಜೆ. ಮುತ್ತಣ್ಣ ಹಾಗೂ ಇತರರು ಸೇರಿ ಲೋಕೋಪಯೋಗಿ ಇಲಾಖೆಯ ಲಾರಿಯಲ್ಲಿ ತಾಳತ್‌ಮನೆ ಎಂಬ ಸ್ಥಳದಿಂದ ಮರದ ದಿಮ್ಮಿಗಳನ್ನು ಸಾಗಿಸಲು ಪ್ರಯತ್ನಿಸುತ್ತಿದ್ದಾರೆಂದು ಸರ್ಕಲ್ ಪೋಲೀಸ್ ಇನ್ಸ್‌ಪೆಕ್ಟರ್, ಮಡಿಕೇರಿ ಇವರಿಗೆ ವರದಿ ಬಂತು. ಆ ಗ್ರಾಮಸ್ಥರು ಈ ದಿಮ್ಮಿಗಳನ್ನು ಸಾಗಿಸಲು ಸೂಕ್ತ ಪರವಾನಗಿ ಇಲ್ಲವೆಂಬ ಸಂಶಯದ ಮೇಲೆ, ಲಾರಿ, ಜನಗಳು ಮತ್ತು ಮರದ ದಿಮ್ಮಿಗಳನ್ನು ಸಾಗಿಸದಂತೆ ತಡೆಹಿಡಿದರು. ಕೂಡಲೇ ಮಡಿಕೇರಿ ಸರ್ಕಲ್ ಇನ್ಸ್‌ಪೆಕ್ಟರ್ ಗ್ರಾಮಾಂತರ ಇವರು ತಮ್ಮ ಸಿಬ್ಬಂದಿಗಳೊಡನೆ ಸ್ಥಳಕ್ಕೆ ಹೋಗಿ ಅವರನ್ನು ಪೋಲೀಸ್ ವಶಕ್ಕೆ ತೆಗೆದುಕೊಂಡರು ಮತ್ತು ಮರದ ದಿಮ್ಮಿಗಳನ್ನು ವಶಪಡಿಸಿಕೊಂಡರು. ಇದಕ್ಕೆ ಸಂಬಂಧಪಟ್ಟಂತೆ ಮಡಿಕೇರಿ ಗ್ರಾಮಾಂತರ ಪೋಲೀಸ್ ಠಾಣೆಯಲ್ಲಿ ಕಲಂ ೪೪೭, ೪೨೭, ೧೪೮ ಮತ್ತು ಕರ್ನಾಟಕ ಮರಗಳ ಸಂರಕ್ಷಣಾ ಅಧಿನಿಯಮ ೧೯೬೫ರ, ೪ ಮತ್ತು ೨೨ಜಿ ಪ್ರಕಾರ ಕ್ರೈಮ್ ನಂಬ್ರ ೧೬೬/೮೮ರಲ್ಲಿ ಈ ಪ್ರಕರಣವನ್ನು ದಾಖಲೆ ಮಾಡಿಕೊಳ್ಳಲಾಯಿತು.

ಈ ಪ್ರಕರಣದಲ್ಲಿ ಮಡಿಕೇರಿ ಜಿಲ್ಲಾ ಕಾರಾಗೃಹದ ಒಬ್ಬ ಜೈಲರ್, ಒಬ್ಬ ವಾರ್ಡರ್ ಮತ್ತು ಲೋಕೋಪಯೋಗಿ ಇಲಾಖೆಯ ಲಾರಿ ಚಾಲಕ ಮತ್ತು ಇತರೆ ೮ ವಿಚಾರಣಾಧೀನ ಖೈದಿಗಳನ್ನು ದಸ್ತಗಿರಿ ಮಾಡಲಾಗಿದೆ.

ಕಾನೂನಿಗೆ ವಿರೋಧವಾಗಿ ಜೈಲಿನಲ್ಲಿರುವ ವಿಚಾರಣಾಧೀನ ಖೈದಿಗಳನ್ನು ಉಪಯೋಗಿಸಿ ಅಕ್ರಮವಾಗಿ ಶ್ರೀಮತಿ ಪಾರ್ವತಿಯವರ ಜಮೀನಿನಲ್ಲಿ ಕಾನೂನು ಬಾಹಿರವಾಗಿ ಮರಗಳನ್ನು ಕಡಿದು ಸಾಗಿಸಲು ಪ್ರಯತ್ನಿಸುತ್ತಿದ್ದರೆಂದು ವರದಿಯಾಗಿದೆ.

ಜೈಲರ್ ಎಂ. ಶ್ರೀನಿವಾಸ್ ಮತ್ತು ವಾರ್ಡರ್ ಶ್ರೀ ಫಿರೋಜ್‌ಪಾಶ ಇವರು ಎಂಟು ವಿಚಾರಣಾಧೀನ ಖೈದಿಗಳನ್ನು ಲೋಕೋಪಯೋಗಿ ಇಲಾಖೆಯ ಲಾರಿಯನ್ನು ಕರೆದುಕೊಂಡು ಹೋಗಿದ್ದಾರೆ. ಈ ಪ್ರಕರಣದಲ್ಲಿ ಶ್ರೀ ಸುರೇಶಬಾಬು, ಅಧೀಕ್ಷಕರು, ಜೈಲರ್ ಶ್ರೀ ಎಂ. ಶ್ರೀನಿವಾಸ್, ವಾರ್ಡರ್ ಶ್ರೀ ಫಿರೋಜ್‌ಪಾಶ ಇವರುಗಳು ಜವಾಬ್ದಾರರೆಂದು ತಿಳಿದುಬರುತ್ತದೆ.

ಆದ್ದರಿಂದ ಕಾರಾಗೃಹ ಅಧೀಕ್ಷಕ ಶ್ರೀ ಸುರೇಶಬಾಬು, ಜೈಲರ್ ಶ್ರೀ ಎಂ. ಶ್ರೀನಿವಾಸ್, ವಾರ್ಡರ್ ಶ್ರೀ ಫಿರೋಜ್‌ಪಾಶರವರನ್ನು ಕೂಡಲೇ ಅಮಾನತ್ತಿನಲ್ಲಿಟ್ಟು ತನಿಖೆ ಮುಂದುವರಿಸಲಾಗುವುದು. ಸರ್ಕಾರ ಇವರ ಮೇಲೆ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಲೂ ಸಹ ಹಿಂಜರಿಯುವುದಿಲ್ಲ.

ಶ್ರೀ ಡಿ. ಎ. ಚಿನ್ನಪ್ಪ.—ಮಾನ್ಯ ಅಧ್ಯಕ್ಷರೇ, ಇದೇ ಮಂಡಿಕೇರಿ ಜೈಲ್‌ನಲ್ಲಿ ಹಿಂದೆ ಒಂದು ಸಲ ಅಂದರೆ ಎರಡು ವರ್ಷಗಳ ಹಿಂದೆ, ಇದೇ ಜೈಲ್ ಸೂಪರಿಂಟೆಂಡೆಂಟ್‌ರು ಜೈಲಿನ ಬೀಗ ತೆಗೆದು ಆರು ಖೈದಿಗಳನ್ನು ಹೊರಗೆ ಬಿಟ್ಟ ಪ್ರಕರಣ ಇದೆ. ಈಗ ಇನ್ನೊಂದು ಪ್ರಕರಣ ಏನೆಂದರೆ ಜೈಲ್ ವಾರ್ಡರ್ ಮತ್ತು ಸೂಪರಿಂಟೆಂಡೆಂಟರು ಅಂದರೆ ಟ್ರೈಯಲ್ ಖೈದಿಗಳನ್ನು ಕರೆದುಕೊಂಡು ಹೋಗಿ ಮರ ಕದ್ದುಕೊಂಡು ಬರತಕ್ಕದ್ದು ಬಹಳ ಆಶ್ಚರ್ಯಕರವಾದ ಸಂಗತಿಯಾಗಿದೆ. ಇದರಲ್ಲಿ ಮುತ್ತಣ್ಣ ಎಂಬ ಒಬ್ಬ ಖೈದಿ ಎರಡು ತಿಂಗಳ ಹಿಂದೆ ಇದೇ ಒಂದು ಗ್ರಾಮದಲ್ಲಿ ಒಂದು ಮಗುವನ್ನು ಕೊಲೆ ಮಾಡಿರುತ್ತಾರೆ. ಮತ್ತೆ ಅದೇ ಗ್ರಾಮಕ್ಕೆ ಅವನನ್ನು ಇವರು ಕರೆದುಕೊಂಡು ಹೋಗಿದ್ದಾರೆ. ಇದನ್ನು ನೋಡಿದಾಗ ಜೈಲಿನ ಭದ್ರತೆ ಎಲ್ಲಿದೆ ಎಂದು ಕೇಳಬೇಕಾಗುತ್ತದೆ? ಇವರು ಎಷ್ಟು ಧೈರ್ಯದಿಂದ ಆ ಊರಿಗೆ ಹೋಗಿದ್ದಾರೆ ಎಂದರೆ, ಪಿ.ಡಬ್ಲ್ಯು.ಡಿ.ಗೆ ಸೇರಿದ ಲಾರಿ ನಂಬರ್ ಸಿಎಜೆ ೪೫೧೧ನ್ನು ತೆಗೆದುಕೊಂಡು ಹೋಗಿ ಮರ ತೆಗೆದುಕೊಂಡು ಬರುವ ಪ್ರಯತ್ನ ಮಾಡಿದ್ದಾರೆ. ಎಷ್ಟರಮಟ್ಟಿಗೆ ಸರಕಾರ ಇವರ ಮೇಲೆ ಬಿಗಿ ಇಟ್ಟಿದೆ ಎಂದು ನಾವು ಕೇಳಬೇಕಾಗುತ್ತದೆ. ಇಂತಹ ಕ್ರಮಗಳನ್ನು ನಾವು ಖಂಡಿಸದೇ ಇದ್ದ ಪಕ್ಷದಲ್ಲಿ ನಿಮಗೆ ರಕ್ಷಣೆ ಸಿಗಲಾರದು. ಖೈದಿಗಳನ್ನೇ ಕರೆದುಕೊಂಡು ಹೋಗಿ ಈ ರೀತಿ ಮಾಡುವುದಾದರೆ, ಆ ಜೈಲ್ ಸೂಪರಿಂಟೆಂಡೆಂಟ್‌ರವರು ಖೈದಿಗಳನ್ನು ಇನ್ನು ಯಾವ ರೀತಿ ರಕ್ಷಣೆ ಮಾಡಲು ಸಾಧ್ಯ ಉಂಟು. ಜೈಲಿನ ಭದ್ರತೆ, ರಕ್ಷಣೆಯನ್ನು ಯಾವ ರೀತಿ ಮಾಡುವುದಕ್ಕೆ ಸಾಧ್ಯ ಎಂಬುದನ್ನು ನಾವು ನೋಡಬೇಕಾಗುತ್ತದೆ. ಆದುದರಿಂದ ತಾವು ಕೂಡಲೇ ಕ್ರಮ ತೆಗೆದುಕೊಂಡು ಜೈಲ್ ಸೂಪರಿಂಟೆಂಡೆಂಟ್ ಮತ್ತು ವಾರ್ಡರ್ ಯಾರು ಭಾಗಿಯಾಗಿದ್ದಾರೆ ಅವರನ್ನು ಬರೀ ಅಮಾನತ್ತಿನಲ್ಲಿ ಇಡುವುದೇ ಅಲ್ಲ, ಕೂಡಲೇ ಇವರ ಬಗ್ಗೆ ವಿಚಾರಣೆ ಮಾಡಿ ಇವರನ್ನು ಕೆಲಸದಿಂದ ವಜಾ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಉಳಿದವರೂ ಕೇಳಿಬಿಡಲಿ, ಆಮೇಲೆ ತಾವು ಉತ್ತರ ಹೇಳಿ.

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಅಧ್ಯಕ್ಷರೇ, ಈ ಪ್ರಕರಣವನ್ನು ನೋಡಿದರೆ ನಿಜವಾಗಿ ಸರ್ಕಾರ ನಾಚಿಕೆಯಿಂದ ತಲೆತಗ್ಗಿಸಬೇಕಾದಂತಹ ವಿಚಾರ. ಇಷ್ಟು ಗಂಭೀರವಾದ ಪ್ರಸಂಗವಿರುವ ಬಂಧಿಖಾನೆಯ ಇಲಾಖೆಯ ಅಧಿಕಾರಿಗಳು ಖೂನಿ ಅಪಾದನೆಗೆ ಒಳಗಾಗಿ ಅಂಡರ್ ಟ್ರಯಲ್ ಪ್ರಿಜನರ್ಸ್ ಉಪಯೋಗಿಸಿಕೊಂಡು ಲೋಕೋಪಯೋಗಿ ಇಲಾಖೆಯ ಲಾರಿಯನ್ನು ಉಪಯೋಗಿಸಿಕೊಂಡು ಇವತ್ತು ಅಕ್ರಮವಾಗಿ ಮರ ಸಾಗಾಣಿಕೆ ಮಾಡಿದ್ದುದು ಇವೆ ಈ ವ್ಯಾಪಕ ಜಾಲದ ಅರ್ಥ ಬಹುಶಃ ಸರ್ಕಾರ ಒಂದು ಹೇಳಿಕೆ ಕೊಟ್ಟು ಬಿಟ್ಟರೆ ಮುಗಿಯಿತೆ ಎಂದು ತಿಳಿದುಕೊಂಡಿರ ಬಹುದೇ ಅರ್ಥವಾಗಲಿಲ್ಲ. ಇದರಲ್ಲಿ ಕಲವು ಮೂಲಭೂತವಾದ ಪ್ರಶ್ನೆಗಳು ಉದ್ಭವವಾಗುತ್ತವೆ. ನಮ್ಮ ಮಾನ್ಯ ಸದಸ್ಯರು ಹೇಳಿದರು ಹಿಂದೆ ಈ ಅಂಡರ್ ಟ್ರಯಲ್ ಪ್ರಿಜನರ್ಸ್‌ನ್ನು ಹೊರಗಡೆ ಬಿಟ್ಟ ಪ್ರಸಂಗವನ್ನು ಹೇಳಿದರು. ಅವರೇ ಸ್ವತಃ ಬೀಗ ತೆಗೆದು ಬಿಟ್ಟಿದ್ದಾರೆ. ಬಹುಶಃ ಇಂತಹ ಕೆಲಸ ಅಲ್ಲಿ ಸರಾಗವಾಗಿ ನಡೆಯುತ್ತಿರಬಹುದು ಇಲ್ಲವಿದ್ದರೆ ಧಾರಳವಾಗಿ ಇವತ್ತು ಅಂಡರ್ ಟ್ರಯಲ್ ಪ್ರಿಜನರ್ಸ್ ಇಟ್ಟುಕೊಂಡು ಈ ಕೆಲಸ ನಡೆಯುತ್ತಿದೆ. ಇಂತಹ ಕೆಲಸ ಯಾವ ಸರ್ಕಾರದಿಂದಲೂ ನಡೆದಿಲ್ಲವೆಂದು ನಾನು ಬಹಳ ವಿಷಾದದಿಂದ ಹೇಳಬೇಕಾಗುತ್ತದೆ. ಇದರಲ್ಲಿ ಮೂಲಭೂತವಾದ ಕೆಲವು ಪ್ರಸಂಗಗಳು ನಮ್ಮ ಕಣ್ಣಿಗೆ ಕಾಣಿಸುತ್ತವೆ. ತಾವು ದಯಮಾಡಿ ನೋಡಬೇಕು. ತಮ್ಮ ಸ್ಟೇಟ್‌ಮೆಂಟಿನಲ್ಲಿ ನೋಡಿ ಯಾವ ತರಹ ಇದೆ ಎಂದು ಕಾರಾಗೃಹ ಅಧೀಕ್ಷಕ ಶ್ರೀಸುರೇಶಬಾಬು ಜೈಲರ್ ಶ್ರೀ ಎಂ. ಶ್ರೀನಿವಾಸ್ ವಾರ್ಡರ್ ಶ್ರೀ ಫಿರೋಜ್ ಪಾಶರವರನ್ನು ಕೂಡಲೇ ಅಮಾನತ್ತಿನಲ್ಲಿಟ್ಟು ತನಿಖೆ ಮುಂದು

ಪರಿಸಲಾಗುವುದು ಸರ್ಕಾರ ಇವರ ಮೇಲೆ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಲು ಸಹ ಹಿಂಜರಿಯುವುದಿಲ್ಲ. ಎಂದು ಪೌರ್‌ಷದಿಂದ ಹೇಳಿದ್ದಾರೆ.

ಶ್ರೀ ಆರ್. ಎನ್. ನಾಯಕ್.—ಉತ್ತರನ ಪೌರುಷ.

ಶ್ರೀ ಎಂ. ವೀರಪ್ಪಮೊಯಿಲಿ.—ಉತ್ತರನ ಪೌರುಷ. ಲೋಕೋಪಯೋಗಿ ಲಾರಿಯಲ್ಲಿ ಜೈಲರ್ ಅಂಡರ್ ಟ್ರಯಲ್ ಪ್ರಿಜನರ್ಸ್‌ನ್ನು ಸೇರಿಸಿಕೊಂಡು ಮರವನ್ನು ಅಕ್ರಮವಾಗಿ ಸಾಗಾಣಿಕೆ ಮಾಡಿದ್ದಾರೆ. ಇದನ್ನು ನೋಡಿಕೊಂಡು ಇವರು ಬಿಟ್ಟಿದ್ದಾರೆ. ಏಷ್ಟು ಚೆನ್ನಾಗಿದೆ ನೋಡಿ, Straightaway it is a criminal case What is this reply ? It is not a reply. It is a case for criminal action. ಅಧ್ಯಕ್ಷರೇ ನಾವು ಸರ್ಕಾರಕ್ಕೆ ಛೀಮಾರಿ ಹಾಕಬೇಕು. ಇದರಲ್ಲಿ ಏನಾಗಿದ ಎಂದರೆ ಸರ್ಕಾರ ಎಷ್ಟರ ಮಟ್ಟಿಗೆ ಕಾನೂನು ಸಂರಕ್ಷಣೆ ಮಾಡುತ್ತಿದೆ ಎನ್ನುವುದಕ್ಕೆ ಈ ಉತ್ತರವೆ ಸಾಕ್ಷಿ. ಇಂತಹ ಉತ್ತರ ವಿತಕ್ಕೆ ಬೇಕು ? ಇವರು ಹಿಂಜರಿಯುವುದಿಲ್ಲವಂತೆ, You can kindly withhold it. We cannot accept this reply. ಮೊಕದ್ದಮೆ ಹಾಕಬೇಕಾಗಿತ್ತು ಸರ್ಕಾರ ಹಿಂಜರಿಯುವುದಿಲ್ಲವೆನ್ನುವ ಪ್ರಶ್ನೆ ಎಲ್ಲಿದೆ ? ಇದು ಯಾವ ತರಹದ ಸಮಂಜಾಯಿಷಿ ಉತ್ತರ ಕೊಡುತ್ತಿದ್ದಾರೆ ತಾವು ನೋಡಿ. ನನಗಂತೂ ಇದು ಅಥವಾಗುತ್ತಿಲ್ಲ ಲೋಕೋಪಯೋಗಿ ಇಲಾಖೆಯ ಲಾರಿಯನ್ನು ತೆಗೆದುಕೊಂಡು ಹೋಗಿರುವ ವಿಚಾರ ಇದೆ. ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳನ್ನು ಏನು ಮಾಡುತ್ತೀರಿ ? ಈ ಲಾರಿಯಲ್ಲಿ ಅಕ್ರಮ ಮರ ಸಾಗಾಣಿಕೆಯಾಗಿದೆ, ಜೈಲರ್ ಖೈದಿಗಳನ್ನು ಜೊತೆಗೂಡಿಸಿಕೊಂಡು ಲಾರಿಯಲ್ಲಿ ಮರ ಸಾಗಿಸಿದ್ದಾರೆ. ನನಗನ್ನಿಸಂತ್ತದೆ ಇಲ್ಲಿ ಇನ್ನು ಬೇರೆ ಬೇರೆ ಇಲಾಖೆಗಳ ಅಧಿಕಾರಿಗಳೂ ಸಹ ಇನ್ವಾಲ್ವ್ ಆಗಿರಬಹುದೆಂದು. ಜೇಲರ್ ಮತ್ತು ಖೈದಿಗಳು ಮಾತ್ರವಲ್ಲ. ಜೇಲರ್ ಮೇಲೆ ಸರ್ಕಾರ ಕ್ರಿಮಿನಲ್ ಮೊಕದ್ದಮೆ ಹೂಡಲು ಹಿಂಜರಿಯುವುದಿಲ್ಲವಂತೆ. ತಮ್ಮ ಪೌರುಷವನ್ನು ಹೇಳಿಕೆಯಲ್ಲಿ ಹೇಳಿಕೊಂಡಿದ್ದಾರೆ. ಸರಿಯಾದ ಉತ್ತರ ಕೊಡಲಿಕ್ಕೆ ಹೇಳಿ. ಯಾರಾದರೂ ಅಧಿಕಾರಿಗಳ ದಾಕ್ಷಿಣ್ಯ ವಿದ್ದರೆ, ನೋಡಿಕೊಳ್ಳಲಿ. ಈ ಉತ್ತರ ನಮಗೆ ಬೇಡ ನಾಳೆ ಬೇರೆ ಉತ್ತರ ತರಿಸಿ ಕೊಡಿ.

ಶ್ರೀ ಕೆ. ಹೆಚ್. ಪಾಟೀಲ್.—ಸರ್ಕಾರದವರು ಪೋಲೀಸಿನವರು ಮಾಡಿದ್ದನ್ನು ತಮ್ಮ ತಲೆ ಮೇಲೆ ವಿತಕ್ಕೆ ಹಾಕಿಕೊಳ್ಳುತ್ತಾರೆ. Why are you entering into the risk. If he is a culprlt, book him. ನಾವು ಮಾಡುವುದಕ್ಕೆ ಹಿಂಜರಿಯುವುದಿಲ್ಲವೆಂದರೆ What does it mean ? You are taking unnecessary odium on yourself ? Instead of that, you say definite action will be taken.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ ಈಗ ಮಾನ್ಯ ಮಂತ್ರಿಗಳ ನೀಡಿದಂತಹ ಉತ್ತರವನ್ನು ನೋಡಿದರೆ ಬಂದೀಖಾನೆಯಲ್ಲಿರತಕ್ಕಂಥ ಬಂದಿಗಳಿಂದ ಮರವನ್ನು ಅಕ್ರಮವಾಗಿ ಸಾಗಿಸಲು ಪ್ರಯತ್ನ ಮಾಡಿರುವ ಸರ್ಕಾರ ಬಂದಿಗಳಿಂದ ಜನರನ್ನು ಪಂಡರ್ ಮಾಡಿಸುವುದಕ್ಕೂ ಹಿಂಜರಿಯುವುದಿಲ್ಲ ಈ ಜನ. ಮಾನ್ಯ ಮೊಯಿಲಿಯವರು ಹೇಳಿದ ಪ್ರಕಾರ ನಿಮ್ಮ ಉತ್ತರದ ಕೊನೆಯ ಪುಟದಲ್ಲಿ ಇಂಥ ಅಧಿಕಾರಿಗಳನ್ನು ಸಸ್ಪೆಂಡ್ ಮಾಡುವುದಕ್ಕೂ ನಾವು ಹಿಂಜರಿಯುವುದಿಲ್ಲವೆಂದು ಹೇಳಿದ್ದೀರಿ. ಇದುವರೆಗೆ ಏಕೆ ಇವರನ್ನೂ ಸಸ್ಪೆಂಡ್ ಮಾಡಲಿಲ್ಲ ? ಅವರುಗಳ ಮೇಲೆ ಕ್ರಿಮಿನಲ್ ಮೊಕದ್ದಮೆಯನ್ನು ಏಕೆ ಹಾಕಲಿಲ್ಲ ? ಇವರುಗಳನ್ನು ಹಾಗೆಯೇ ಬಿಟ್ಟರೆ ಇದೇ ರೀತಿ ಇನ್ನೂ ಕ್ರಿಮಿನಲ್ ಕೆಲಸಗಳನ್ನು ಮಾಡುತ್ತಾರೆ. ಇಂಥ ಅಪರಾಧಿಗಳ ಮೇಲೆ ತಕ್ಷಣ ಕ್ರಮ ತೆಗೆದುಕೊಳ್ಳುವುದಕ್ಕೆ ನೀವು ಏನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ ? ಇಂಥ ಘಟನೆಗಳು ಮೇಲಿಂದ ಮೇಲೆ ಆಗುತ್ತಿರಬಹುದೆಂದು ನಾವು ಅನುಮಾನಪಡಬೇಕಾದ ಸಂದರ್ಭ ಇದೆ. ಬಂಧಿಖಾನೆಯಲ್ಲಿ ನಡೆದಿರುವಂಥ ಘಟನೆಗಳು ಬೇರೆ ಬಂಧಿಖಾನೆಯಲ್ಲಿ ನಡೆಯದೇ ಇರುವ ಹಾಗೆ ಏನಾದರೂ ಮುಂಜಾಗರೂಕತೆ ಕ್ರಮಗಳನ್ನು ತಗೆದುಕೊಂಡಿದ್ದೀರಾ ? ಆಮೇಲೆ ಈ ಪ್ರಕರಣದಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿದ ಲಾರಿಯನ್ನು ಉಪಯೋಗ ಮಾಡಿಕೊಳ್ಳಲಾಗಿದೆ. ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳ ಮೇಲೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ ? ಸಂಬಂಧಪಟ್ಟ ಅಧಿಕಾರಿಗಳನ್ನು ಸಸ್ಪೆಂಡ್ ಮಾಡುವುದರಲ್ಲಾಗಲೀ, ಅವರುಗಳ ಮೇಲೆ ಕ್ರಿಮಿನಲ್ ಮೊಕದ್ದಮೆಯನ್ನು ಹಾಕುವುದರಲ್ಲಾಗಲೀ ಇದುವರೆಗೆ ಸರ್ಕಾರ ಏನೂ ಕ್ರಮ ತೆಗೆದುಕೊಂಡಿಲ್ಲ. ಇದರ ಬಗ್ಗೆ ಸರಿಯಾಗಿ ಮಾನ್ಯ ಮಂತ್ರಿಯವರು ಉತ್ತರ ಕೊಡಬೇಕೆಂದು ಬಯಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ಇದರಲ್ಲಿ ಏನಾಗಿದೆ ಎಂದರೆ, ಹೊಲ ಸುರಕ್ಷಿತವಾಗಿರಬೇಕೆಂದು ಬೇಲಿ ಹಾಕುತ್ತಾರೆ. ಇದು ಬೇಲಿಯೇ ಎದ್ದು ಹೊಲ ಮೇಯ್ದ ಹಾಗೆ ಆಯಿತು. ಜನರ ರಕ್ಷಣೆಗಾಗಿ ಪೋಲೀಸಿನವರು ಇರುತ್ತಾರೆ, ಜನರುಗಳಿಗೆ ಒಳ್ಳೆಯದನ್ನು ಮಾಡುವುದಕ್ಕೆ ಸರ್ಕಾರ ಇರುತ್ತದೆ, ಜನರುಗಳ ಕೆಲಸ ಮಾಡುವುದಕ್ಕೆ ಅಧಿಕಾರಿಗಳು ಇರುತ್ತಾರೆಂದು ಭಾವನೆ ಎಲ್ಲರಿಗೂ ಈ ಹಿಂದೆ ಇತ್ತು. ಈಗ ಏನಾಗಿದೆ ಎಂದರೆ, ಸರ್ಕಾರದ ಅಧಿಕಾರಿಗಳು ಶಾಮಿಲಾಗಿ ಸ್ಮಗ್ಲಿಂಗ್‌ಗೆ ಅವಕಾಶ ಕೊಡುತ್ತಾರೆಂದರೆ ನಿಜವಾಗಲೂ ನಾವೆಲ್ಲರೂ ತಲೆತಗ್ಗಿಸತಕ್ಕಂಥ ವಿಷಯವಾಗಿದೆ ಮಾನ್ಯ ಮಂತ್ರಿಯವರು ತಮ್ಮ ಉತ್ತರದಲ್ಲಿ ಅವರುಗಳನ್ನು ಸಸ್ಪೆನ್ಷನ್‌ನಲ್ಲಿ ಇಡುತ್ತೇವೆಂದು ಹೇಳಿದ್ದಾರೆ. ಇಲ್ಲಿಯವರೆಗೆ ಅವರುಗಳನ್ನು ಸಸ್ಪೆನ್ಷನ್‌ನಲ್ಲಿ ಏಕೆ ಇಡಲಿಲ್ಲ? ಅವರುಗಳ ಮೇಲೆ ಇಲ್ಲಿಯವರೆಗೂ ಕ್ರಿಮಿನಲ್ ಕೇಸ್‌ನ್ನು ಏಕೆ ರಿಜಿಸ್ಟರ್ ಮಾಡಿಲ್ಲ? ಸರ್ಕಾರ ತನ್ನ ನೆಗ್ಲಿಜೆನ್ಸ್‌ನ್ನು ಇದರಲ್ಲಿ ತೋರಿಸುತ್ತದೆಂದು ನಮಗೆ ಸಂಶಯ ಬರುತ್ತದೆ. ಗೌರ್ನಮೇಂಟೇ ಇದಕ್ಕೆಲ್ಲಾ ಸ್ವತಃ ಎನ್‌ಕರೇಜ್ ಮಾಡುತ್ತಿದೆಯೇನೋ ಎಂದು ಸಂಶಯ ನಮಗೆ ಬರುತ್ತದೆ. ಏಕೆಂದರೆ ಒಂದು ವೇಳೆ ಅವರ ಮೇಲೆ ಕ್ರಿಮಿನಲ್ ಕೇಸ್ ಹಾಕಬೇಕೆಂದು ಸರ್ಕಾರದ ಇಚ್ಛೆ ಇದ್ದಿದ್ದರೆ ಯಾವ ದಿವಸ ಈ ವಿಷಯ ಸರ್ಕಾರದ ನೋಟೀಸ್‌ಗೆ ಬಂತೊ ಆ ತಕ್ಷಣವೇ ಕ್ರಮವನ್ನು ತೆಗೆದುಕೊಳ್ಳಬಹುದಾಗಿತ್ತು. ಕ್ರಮ ತೆಗೆದುಕೊಳ್ಳುವುದಕ್ಕೆ ಇಲ್ಲಿಯವರೆಗೆ ಡಿಲೇ ಏಕೆ ಆಯಿತು ? ಇದಕ್ಕೆ ಏನು ಕಾರಣವೆಂದು ಸ್ಪಷ್ಟವಾಗಿ ತಾವು ಉತ್ತರ ಕೊಡಬೇಕು. ಈಗ ನೀವು ಸಮರ್ಪಕವಾದ ಉತ್ತರವನ್ನು ಕೊಟ್ಟಿಲ್ಲ. ನಾಳೆಯ ದಿವಸ ಡೀಟೇಲ್ ಮಾಹಿತಿಯನ್ನು ತರಿಸಿಕೊಂಡು ಉತ್ತರವನ್ನು ಕೊಡಿ, ಅಷ್ಟರೊಳಗೆ ನೀವು ಆಕ್ಷನ್ ಅವರ ಮೇಲೆ ತೆಗೆದುಕೊಳ್ಳಿ. ನಿಮ್ಮ ಉತ್ತರದಲ್ಲಿ ನಾವು ಅವರುಗಳ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಹಿಂಜರಿಯುವುದಿಲ್ಲ, ಹಿಂದು ಮುಂದು ನೋಡುವುದಿಲ್ಲ ಎಂದೆಲ್ಲಾ ಹೇಳಿದ್ದೀರಿ. ನಾವು ಈ ಕಾಲಿಂಗ್ ಅಟೆನ್‌ಷನ್‌ನ್ನು ಕೇಳಿದ ಮೇಲೆ ತಾವು ಉತ್ತರವನ್ನು ಕೊಟ್ಟಿದ್ದೀರಿ. ಮೊದಲೇ ಏಕೆ ಕ್ರಮವನ್ನು ತೆಗೆದುಕೊಳ್ಳಲಿಲ್ಲ ? ರಾಜ್ಯದಲ್ಲಿ ನಡೆಯುವ ಎಲ್ಲಾ ವಿಷಯವನ್ನು ಸದನದಲ್ಲಿ ಪ್ರಸ್ತಾಪ ಮಾಡುವುದಕ್ಕಾಗುತ್ತದೆಯೇ ? ಇಂಥದ್ದು ಪತ್ರಿಕೆಗಳಲ್ಲಿ ಬಂದ ತಕ್ಷಣ ಅಥವಾ ಅಧಿಕಾರಿಗಳ ಗಮನಕ್ಕೆ ಬಂದ ತಕ್ಷಣ ಕ್ರಮವನ್ನು ತೆಗೆದುಕೊಳ್ಳಬೇಕು. ಅದು ಬಿಟ್ಟು ಸದನದಲ್ಲಿ ಪ್ರಸ್ತಾಪ ಆಗುವವರೆಗೂ ಸರ್ಕಾರ ಸುಮ್ಮನೆ ಇರುವುದು ಸರಿಯಲ್ಲ. ಆದ್ದರಿಂದ, ಇದರ ಬಗ್ಗೆ ಡೀಟೇಲ್ ಆಗಿ ಮಾಹಿತಿಯನ್ನು ತರಿಸಿಕೊಂಡು ನಾಳೆ ದಿವಸ ತಾವು ಉತ್ತರ ಕೊಡಿ.

ಅಧ್ಯಕ್ಷರು.—ನಾಳೆ ಉತ್ತರ ಕೊಡುತ್ತೀರೋ ? ಈಗಲೇ ಕೊಡುತ್ತೀರೋ ?

ಶ್ರೀ ವೀರಣ್ಣ.—ಈಗಲೇ ನಾನು ಉತ್ತರ ಹೇಳುತ್ತೇನೆ, ಯಾವುದೇ ರೀತಿಯಿಂದ ಲೂ ಯಾರನ್ನೇ ಆಗಲೀ ಸಂರಕ್ಷಣೆ ಮಾಡತಕ್ಕ ಪ್ರಶ್ನೆಯೇ ಇಲ್ಲ. I admit that they have committed illegal things. ಇದರ ಬಗ್ಗೆ ಇನ್‌ಕ್ವೈರಿ ಮಾಡುವುದಕ್ಕೆ ಮೈಸೂರಿನ ಜೇಲ್ ಸೂಪರಿಂಟೆಂಡೆಂಟ್‌ರವರಾದ ತಾವರೇಕರ್ ಅವರನ್ನು ಸರ್ಕಾರ ಅಲ್ಲಿಗೆ ಕಳಿಸಿಕೊಟ್ಟಿದೆ. ಇನ್ನೂ ರಿಪೋರ್ಟ್ ಬಂದಿಲ್ಲ. They will be kept under suspension immediately and criminal prosecution will also be launched. ತಪ್ಪು ಮಾಡಿದ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರ ಹಿಂಜರಿಯುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮೊದಲು ಸಸ್ಪೆಂಡ್ ಮಾಡಿ.

SRI VEERANNA.—Government will not spare anybody.

SRI M. MALLIKARJUNA KHARGE.—Hon. Minister has to do it first

SRI VEERANNA. — We will take criminal prosecution. ತಪ್ಪು ಮಾಡಿರುವ ಅಧಿಕಾರಿಗಳ ಮೇಲೆ, ರಿಪೋರ್ಟ್ ಬಂದ ತಕ್ಷಣ ಕ್ರಮ ತೆಗೆದುಕೊಳ್ಳುತ್ತೇವೆಂದು ಆಶ್ವಾಸನೆ ಕೊಡುವುದಕ್ಕೆ ಬಯಸುತ್ತೇನೆ, ಹಾಗೂ ಅವರನ್ನು ಸಸ್ಪೆಂಡ್ ಮಾಡಿ ಆ ಆರ್ಡರನ್ನು ಬೇಕಾದರೆ ತಮಗೆ ಕಳಿಸಿಕೊಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸಸ್ಪೆಂಡ್ ಮಾಡುವುದು ಈಗ ಶಿಕ್ಷೆಯಲ್ಲ. ಆಫೆನ್ಸ್ ಯಾವಾಗ ನಡೆದಿದೆ, ಯಾರು ಇದರಲ್ಲಿ ಪಾಲ್ಗೊಂಡವರು ಎಂಬುದೆಲ್ಲಾ ಮುಖ್ಯವಾಗುತ್ತದೆ.

ಶ್ರೀ ವೀರಪ್ಪ.—ಮಾನ್ಯ ವೀರಣ್ಣ ಮೊಯಿಲಿಯವರು ಸಸ್ಪೆನ್‌ಷನ್ ಶಿಕ್ಷೆಯಲ್ಲ ಎಂದು ಹೇಳಿದ್ದನ್ನು ನೂರಕ್ಕೆ ನೂರರಷ್ಟು ನಿಜ ಎಂದು ಒಪ್ಪುತ್ತೇನೆ. ಇಂಥ ಅಪರಾಧಕ್ಕೆ ಡಿಸ್ಮಿಸ್ ಮಾಡಿ ಮನೆಗೆ ಕಳುಹಿಸಬೇಕು. ಆದರೆ ಅದಕ್ಕೆ ರಿಪೋರ್ಟ್ ಬೇಕಾಗಿರುವುದರಿಂದ ಎನ್‌ಕ್ವೈರಿ ಮಾಡಿ ಅದರ ಆಧಾರದ ಮೇಲೆ ಮಾಡಲಾಗುವುದು. Government will take stern action against them.

ಅಧ್ಯಕ್ಷರು.—ಇಲ್ಲಿಗೆ ಸಾಕು ಮಾಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ —ಎಲ್ಲದಕ್ಕೂ ತಾವು ಸಾಕು ಎನ್ನುತ್ತೀರಲ್ಲ! ನೀವು ಈ ರೀತಿ ಡಿಫೆಂಡ್ ಮಾಡುತ್ತಾ ಹೋಗುವುದರಿಂದಲೇ ನಿಮ್ಮ ಮಾತಿಗೂ ಅವರು ಗಮನ ಕೊಡುತ್ತಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸಸ್ಪೆಂಡ್ ಆದ ಮೇಲೆ ಡಿಸ್ಮಿಸ್ ಮಾಡುತ್ತೇವೆ ಎಂದು ಪಾಠ ಹೇಳಿಕೊಡುವ ಹಾಗೆ ಹೇಳುವುದು ಬೇಡ. ನಮಗೂ ಗೊತ್ತು ಅದೆಲ್ಲ. That basic thing we know. "If he found guilty he will be suepended etc." we are not going to be tempted by your suspension. ಈ ಘಟನೆ ೨೦-೫-೧೯೮೮ ನಡೆದಿದ್ದರೂ ಈಗ ಒನೇ ತಾರೀಖು. ಅಂಡರ್‌ಟ್ರಯಲ್ಸನ್ನು ಉಪಯೋಗ ಮಾಡಿಕೊಂಡು ಇವರು ಮುರ ಕಳ್ಳ ಸಾಗಾಣಿಕೆ ಮಾಡಿದ್ದಾರೆ, ಆದರೆ ಅವರ ಮೇಲೆ ಕೇಸ್ ಬುಕ್ ಮಾಡಿಲ್ಲ, ಅರೆಸ್ಟ್ ಮಾಡಿಲ್ಲ.

ಶ್ರೀ ವೀರಣ್ಣ.—ಇಲ್ಲ, ಅವರನ್ನು ಅರೆಸ್ಟ್ ಮಾಡಿ ಕೇಸ್ ಬುಕ್ ಮಾಡಿದ್ದೇವೆ. ಆ ಮೇಲೆ ಅವರು ಜಾಮೀನಿನ ಮೇಲೆ ಬಿಡುಗಡೆಯಾಗಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಆಯಿತು, ನೀವು ಯಾವಾಗ ಯಾರು ಯಾರನ್ನು ಅರೆಸ್ಟ್ ಮಾಡಿದಿರಿ, ಈಗ ಅವರು ಎಲ್ಲಿದ್ದಾರೆ, ಆನೇಲೆ ಅಫೆನ್ಸ್‌ಗೆ ಉಪಯೋಗಿಸಿದ ವಾಹನ ಪಿಡಬ್ಲ್ಯೂಡಿ ಇಲಾಖೆಯದು. ಆ ವಾಹನದ ಇನ್‌ಚಾರ್ಜ್ ಆಫೀಸರನ್ನು ಏಕೆ ಅರೆಸ್ಟ್ ಮಾಡಿಲ್ಲ ?

ಶ್ರೀ ವೀರಣ್ಣ.—ವಾಹನ ಚಾಲಕನನ್ನು ಅರೆಸ್ಟ್ ಮಾಡಿದ್ದೇವೆ.

ಶ್ರೀ ಕೆ. ಹೆಜ್. ಪಾಟೀಲ್.—ನೋ ನೋ, ಫಾರೆಸ್ಟ್ ಆಕ್ಟ್‌ನಲ್ಲಿ ಸಹಿತ ಸ್ಮಗಲ್ ಗೂಡ್ಸ್ ಮಾಡುವ ವಾಹನ ಮಾಲೀಕರ ವಿರುದ್ಧವೂ ಕೇಸ್ ಹಾಕಬೇಕೆಂದು ಇದೆ. You should arrest the custodian of the vehicle i.e. Executive Engineer, or Asst. Engineer of P.W.D. If you have uot arrested, what does it mean ?

ಶ್ರೀ ಎಂ. ವೀರಪ್ಪ ಮೊಯಿಲಿ.—ಈ ಕೇಸ್‌ನಲ್ಲಿ ಆಫೆನ್ಸ್ ಬಹಳ ಚೆನ್ನಾಗಿ ಎಸ್ಟಾಬ್ಲಿಷಾಗಿದೆ. ಮುರವನ್ನು ಅಕ್ರಮವಾಗಿ ಸಾಗಿಸಿರುವುದು ಮಾಲು ಸಮೇತ ಸಿಕ್ಕಿಹಾಕಿಕೊಂಡಿರುವುದೂ ಇದೆ, ಆದ್ದರಿಂದ ಇದನ್ನು ಬಹಳ ಸಲುಗೆಯಿಂದ ನೋಡುವುದು ಬೇಡ. ಇಂತಹವರನ್ನು ಸಸ್ಪೆಂಡ್‌ನಲ್ಲಿಟ್ಟಿದ್ದೇವೆಂದು ಹೇಳಿ ಇವರು ಸುಖವಾಗಿ ಕಾಲಿತಿದ್ದಾರೆ. You have to keep the Superintendent of the Jail also under suspension. You have to prosecute him also. You have to withheld this and we want a detailed reply on this.

ಶ್ರೀ ವೀರಣ್ಣ.—ರಿಪೋರ್ಟ್ ಬಂದರೆ ಇವತ್ತೇ ಸಸ್ಪೆಂಡ್ ಮಾಡುತ್ತೇವೆ. ನಾವು ಅವರನ್ನು ಸ್ಪೇರ್ ಮಾಡುವುದಿಲ್ಲ. ಮಾನ್ಯ ಮೊಯಿಲಿಯವರು ಹೇಳಿದ ರೀತಿಯಲ್ಲಿ ಸಸ್ಪೆಂಡ್ ಮಾಡಿದರೆ ಅದು ಪನಿಷ್‌ಮೆಂಟ್ ಆಗುವುದಿಲ್ಲ, ಸಸ್ಪೆಂಡ್ ಮಾಡಿದರೂ ಕೂಡ ೭೫ ಪರ್ಸೆಂಟ್, ೬೦ ಪರ್ಸೆಂಟ್ ಸಂಬಳ ಕೊಡುತ್ತೇವೆ. ಅವರಿಗೆ ಸಿವಿಯರ್ ಪನಿಷ್‌ಮೆಂಟ್ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಅವರ ತಪ್ಪು ಪ್ರೂವ್ ಆದರೆ ಡಿಸ್‌ಮಿಸ್ ಕೂಡ ಮಾಡುತ್ತೇವೆ ಮತ್ತು ಕ್ರಿಮಿನಲ್ ಪ್ರೊಕದ್ದಮೆ ಯನ್ನು ಸಾಕುತ್ತೇವೆ ಮತ್ತು ಕಾನೂನು ಪ್ರಕಾರ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ವಿವರವಾದ ಉತ್ತರವನ್ನು ನಾಳೆ ಇಲ್ಲವೇ ನಾಡಿದ್ದು ಕೊಡಲಿ. ಯಾವಾಗ ಅರೆಸ್ಟ್ ಮಾಡಿದಿರಿ ? ಅವರ ಬಿಡುಗಡೆ ಯಾವಾಗ ಆಯಿತು, ವೆಹಿಕಲ್

ಇನ್‌ಚಾರ್ಜ್ ಯಾರು ಇದ್ದರು ಫಾರೆಸ್ಟ್ ಆಕ್ಟ್ ಪ್ರಕಾರ ಅವರ ಮೇಲೆ ಏನು ಕ್ರಮ ತೆಗೆದು ಕೊಂಡಿದ್ದೀರಿ ? What action you have taken as per Forest Act ?

ಶ್ರೀ ವೀರಣ್ಣ.—ನಾವು ಯಾರನ್ನೂ ಡಿಫೆಂಡ್ ಮಾಡಬೇಕೆಂಬ ಪ್ರಶ್ನೆಯಿಲ್ಲ. ಸರಕಾರದ ಮನಸ್ಸು ಏನು ಎಂದು ಅವರಿಗೂ ಗೊತ್ತಾಗಿದೆ. ಸರಕಾರದ ಮೇರೆ ಯಾವುದೇ ರೀತಿಯ ಒತ್ತಡವಿಲ್ಲ, ಡ್ರೈವರ್ ಅನ್ನು ಅರೆಸ್ಟ್ ಮಾಡಿದ್ದೇವೆ.

SRI M. VEERAPPA MOILY —Hon. Minister has not understood our anxiety. The people have caught them red handed. You must compliment those people. This trend of using undertrials and committing offences is not un-common. It is going on in many other parts including Bangalore. Evey in Central Jail under-trials are used for such things. The only defficulty is of catching them. It is happening all over Karnataka. The Government should take stern action in tuch matters. We must compliment those people. We want a detailed answer or else, you must allow us for half-an-hour discussion.

SRI M. MALLIKARJUNA KHARGE.—What are the faets ? Why such things are going on ? Who are behind this ? We must know all these things. You have not told us, who all have been arrested and when they have been arrested.

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ ಮೂರು ಸಲ ನಮಗೆ ಅವಕಾಶ ಕೊಟ್ಟಿದ್ದೀನಿ ಅವರು ಉತ್ತರ ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಅವರ ಉತ್ತರದಿಂದ ತಮಗೆ ಸಮಾಧಾನವಾಯಿತೇ ? ಅವರನ್ನು ಯಾವಾಗ ಅರೆಸ್ಟ್ ಮಾಡಿದರು ? ಯಾವಾಗ ಬಿಡುಗಡೆಯಾಯಿತು ಈಗ ಎಲ್ಲಿ ಇದ್ದಾರೆ ಎಂಬುದನ್ನು ಅವರು ತಿಳಿಸಬೇಕು. ಫಾರೆಸ್ಟ್ ಆಕ್ಟ್ ಪ್ರಕಾರ ಲಾರಿ ಓನರ್ ಅನ್ನು ಅರೆಸ್ಟ್ ಮಾಡಬೇಕಾಗಿತ್ತು.

ಶ್ರೀ ವೀರಣ್ಣ.—ನನಗೆ ಬಂದಿರುವ ವರದಿ ಪ್ರಕಾರ.....

ಶ್ರೀ ಕೆ. ಹೆಚ್. ಪಾಟೀಲ್.—ಆ ವರದಿ ಬಿಡಿ. ಡಿ ಜಿ ಪಿಯವರನ್ನು ಕರೆಯಿಸಿ ಕೇಳಿ. ೪ ತಿಂಗಳು ಏಕೆ ತಡವಾಯಿತು ಅಲ್ಲಿಯವರೆಗೆ ಏನೇನು ಕ್ರಮ ತೆಗೆದುಕೊಂಡಿದ್ದಾರೆ ಎಂಬುದನ್ನು ಕೇಳಿ ವಿವರವಾದ ಉತ್ತರವನ್ನು ಕೊಡಬೇಕು. You please make sure about the factual position and reply us, tomorrow or day-after.

SRI M. VEERAPPA MOILY, —Life will not be safe with this kind of trend.

ಶ್ರೀ ವೀರಣ್ಣ.—ಯಾರು ಯಾರನ್ನು ಅರೆಸ್ಟ್ ಮಾಡಲಾಗಿತ್ತೆಂದರೆ ಲಿಂಗಪ್ಪನ್, ಅಪ್ಪಾಸ್ವಾಮಿ, ಸಾಲೇಬಾಬು, ಅಪ್ಪಣ, ತಿಮ್ಮಯ್ಯ, ಕೆ.ಎಂ ಗುಣಕಣ್ಣನ್, ಚಂದ್ರಶೇಖರ್ ವೀರಪಾಶ ಮುಂತಾದವರಿದ್ದಾರೆ. ಇವರೆಲ್ಲರನ್ನೂ ಅರೆಸ್ಟ್ ಮಾಡಿ ಕೋರ್ಟ್ ಮುಂದೆ ಹಾಜರುಪಡಿಸಿದ ಮೇಲೆ ಜಾಮೀನಿನ ಮೇಲೆ ಅವರನ್ನೆಲ್ಲಾ ಬಿಡಲಾಯಿತು.

ಅಧ್ಯಕ್ಷರು.—ಇಷ್ಟನ್ನು ಆಗಲೇ ಹೇಳಿದ್ದಿದ್ದರೆ ಇಷ್ಟೊತ್ತಿಗೆ ವಿಷಯ ಕ್ಲೋಸ್ ಆಗಿಬಿಡುತ್ತಿತ್ತು.

SRI K.H. PATIL.—Why you have not prosecuted the Jailer of the Jail Superintendent ? Why did you not arrest them. Why did you not book the case against the custodian of the vehicle ? Have you launched a case under Sec. 379 ? ಎಷ್ಟು ಮಂದಿ ಖೈದಿಗಳನ್ನು ಉಪಯೋಗಿಸಿಕೊಂಡರು,

ಅದಕ್ಕೆ ಕಾರಣರಾದ ಜೈಲಿನ ಸೂಪರಿಂಟೆಂಡೆಂಟರನ್ನು ಏಕೆ ಅರೆಸ್ಟ್ ಮಾಡಿಲಿಲ್ಲ? Let him take his own time, study the facts and then give a report to this House.

(Interruption)

MR. SPEAKER.—The matter has been closed.

ಶ್ರೀ ಎ. ಮಲ್ಲಿಕಾರ್ಜುನ ಖರ್ಗೆ.—ಇವತ್ತೇ ಉತ್ತರ ಕೊಡಿ ಎಂದು ಕೇಳುತ್ತಿಲ್ಲ. ನಾಳೆ ಬೇಕಾದರೆ ಕೊಡಲಿ.

(ಗದ್ದಲ)

ಅವರು ಸರಿಯಾಗಿ ಉತ್ತರ ಕೊಡಲು ಸಿದ್ಧರಿಲ್ಲ ಎಂದರೆ ನಾವು ಕೇಳಿದ್ದಕ್ಕೆ ಬೆಲೆ ಇಲ್ಲ ಎಂದು ಹಾಗಾಯಿತು. ಇದೇ ಏನು ಸರ್ಕಾರ ನಡೆಸುವ ರೀತಿಯೇ ? ಬೇಕಾದರೆ ನಾಳೆ ಸರಿಯಾದ ಉತ್ತರವನ್ನು ಕೊಡಲಿ.

ಅಧ್ಯಕ್ಷರು.—ಈ ವಿಷಯ ಈಗ ಮುಕ್ತಾಯವಾಗಿದೆ.

(ಗದ್ದಲ)

ಅಧ್ಯಕ್ಷರು.—ನೋಡಿ ಅರೆಸ್ಟ್ ಆದವರ ಹೆಸರು, ಕೇಸಿನ ವಿವರ ಕೊಡಿ ಎಂದರು ಅದನ್ನು ಸಚಿವರು ಕೊಟ್ಟರು. ತಮ್ಮ ಕಡೆಗೂ ಸಾಕಷ್ಟು ಅವಕಾಶ ಕೊಟ್ಟಿದ್ದೇನೆ. ಕೆ. ಹೆಚ್ ಪಾಟೀಲರು ಸಿಟ್ಟೇರಿ ಅಲ್ಲದಿದ್ದರೂ ಹಿರಿಯ ಸದಸ್ಯರೆಂದು ಅವರಿಗೂ ಮಾತಾಡಲು ಅವಕಾಶ ಕೊಟ್ಟಿದ್ದೇನೆ. ಮೂರು ಸಲ ಅವಕಾಶ ಕೊಟ್ಟಿದ್ದೇನೆ ಇವತ್ತು ಸಂಜೆಯೊಳಗೆ ಸಸ್ಪೆಂಡ್ ಮಾಡಲಿಲ್ಲ ಎಂದರೆ ಹೇಗೆ? ನಾಳೆ ಬೇಕಾದರೆ ಕೇಳಿ.

SRI K. H. PATIL.—We are thankful for your courtesy. What we are reqeusting is, it is a question of public property and also smuggling of the forest wood. We want his detailed explanation Let him consult first the officers and then submit a detailed report to this House. Let him take one week, we have no objeetion. As our Deputy Leader said, let him make a statement tomorrow or day after.

ಅಧ್ಯಕ್ಷರು.—ಡೀಟೆಲ್ಡ್ ಮಾಹಿತಿ ಕೊಡಿ I do agree with you. It is a most important subject.

(Interruption)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ ಈ ವಿಚಾರವನ್ನು ಸದನದಲ್ಲಿ ರೇಸ್ ಮಾಡಿರುವುದರಿಂದ ಅದು ಈ ಸದನಕ್ಕೆ ಗೊತ್ತಾಗಬೇಕು.

ಅಧ್ಯಕ್ಷರು.—ಈ ಸದನಕ್ಕೆ ಮಾಹಿತಿ ಕೊಡಿ ಎಂದು ಹೇಳುತ್ತೇನೆ ದಯವಾಡಿ ಮಾನ್ಯ ಸದಸ್ಯರು ಈಗ ಕುಳಿತುಕೊಳ್ಳಬೇಕು.

ಶ್ರೀ ವೀರಣ್ಣ.—ಅಧ್ಯಕ್ಷರೇ ಮಾನ್ಯ ಸದಸ್ಯರಿಗೆ ಸರ್ಕಾರದವರು ಅವರನ್ನು ಡಿಫೆಂಡ ಮಾಡಿಕೊಳ್ಳುತ್ತಾರೆ ಸರಿಯಾದಂಥ ಪರದಿಯನ್ನು ಕೊಟ್ಟಿಲ್ಲ ಎನ್ನುವ ಭಾವನೆ ಬಂದಿದೆ. ಅವರ ಮನಸ್ಸಿನಲ್ಲಿ ಯಾವ ರೀತಿ ಇದೆ ಎನ್ನುವುದು ನಮಗೆ ಹೇಗೆ ಗೊತ್ತಾಗುತ್ತದೆ, ಈಗ ಅವರಿಗೆ ಯಾವಾಗ ಅರೆಸ್ಟ್ ಮಾಡಲಾಯಿತು. ತಾರೀಖು ಯಾವುದು ಯಾವಾಗ ಸಸ್ಪೆಂಡ್ ಮಾಡುತ್ತೀರಾ ಎನ್ನುವ ಬಗ್ಗೆ ಮಾಹಿತಿ ಕೊಡಬೇಕೆಂದು ಕೇಳುತ್ತಿದ್ದಾರೆ ಅದರ ಬಗ್ಗೆ ನಾಳೆ ಅಥವಾ ನಾಡಿದ್ದು ಡೀ ಟೇಲ್ಡ್ ಸ್ಟೇಟ್‌ಮೆಂಟ್ ಕೊಡುತ್ತೇನೆ.